ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ,
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-560023
ದೂ ಸಂಖ್ಯೆ: : 08022373587,
e-mail: mdnrhmkar@gmail.com

**DO NO:** NHM /CPHC-UHC/Fit Health Worker/29/2020-21 ದಿನಾಂಕ: 13/08/2020

# ಸುತ್ತೋಲೆ

ವಿಷಯ: ರಾಜ್ಯದ ಎಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ವ್ಯಾಪ್ತಿಯಲ್ಲಿ **"ಫಿಟ್ ಇಂಡಿಯಾ ಫ್ರೀಡಮ್ ರನ್ 2.0"** ಅನ್ನು ವ್ಯವಸ್ಥಿತವಾಗಿ ಆಯೋಜಿಸುವ ಕುರಿತು.

ಉಲ್ಲೇಖ: **ಜಂಟಿ ಕಾರ್ಯದರ್ಶಿಗಳು, ಭಾರತ ಸರ್ಕಾರ ರವರ ಪತ್ರ ಸಂಖ್ಯೆ D.O No. Z-28015/59/2019 NHM-I. ದಿನಾಂಕ: 12/08/2021.**

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತದ 75 ನೇ ಸ್ವಾತಂತ್ರ್ಯೋತ್ಸವದ ಆಚರಣೆ ಅಂಗವಾಗಿ **"Healthier and Fit India"** ಎಂಬ ಧ್ಯೇಯವಾಖ್ಯದೊಂದಿಗೆ **"ಫಿಟ್ ಇಂಡಿಯಾ ಫ್ರೀಡಮ್ ರನ್ 2.0"** ನ್ನು ಯುವಜನ ಹಾಗೂ ಕ್ರೀಡಾ ಮಂತ್ರಾಲಯದ ಸಹಯೋಗದೊಂದಿಗೆ ಆಯೋಜಿಸಲು ಕ್ರಮವಹಿಸಲಾಗುತ್ತಿದೆ.

ಸದರಿ ಕಾರ್ಯಕ್ರಮದಲ್ಲಿ Both Virtual & Organized Event ಆಗಿ ಒಂದು **"ಫಿಟ್ ಇಂಡಿಯಾ ಫ್ರೀಡಮ್ ರನ್ 2.0" ಓಟದ** ಚಟುವಟಿಕೆಯನ್ನು ಎಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ವ್ಯಾಪ್ತಿಯಲ್ಲಿ ಕೋವಿಡ್-19 ನ ಮಾನದಂಡವನ್ನು ಅನುಸರಿಸಿ ದಿನಾಂಕ: 13/08/2021 ರಿಂದ 02/10/2021 ರೊಳಗೆ ಯಾವುದಾದರು ಒಂದು ದಿನ ಆಯೋಜಿಸಬೇಕಾಗಿರುತ್ತದೆ.

ತತ್ಸಂಬಂಧ ಕೋವಿಡ್-19 ನ ತಡೆಗಟ್ಟುವಿಕೆಗೆ ಸಂಬಂಧಿಸಿದ ಸುರಕ್ಷಿತ ಮಾನದಂಡಗಳನ್ನು ಅನುಸರಿಸುತ್ತಾ ಎಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರ (ಪ್ರಾಥಮಿಕ ಆರೋಗ್ಯ ಕೇಂದ್ರ, ನಗರ ಆರೋಗ್ಯ ಕೇಂದ್ರ ಹಾಗೂ ಉಪಕೇಂದ್ರ) ಗಳಲ್ಲಿ **"ಫಿಟ್ ಇಂಡಿಯಾ ಫ್ರೀಡಮ್ ರನ್ 2.0" ಓಟದ** ಚಟುವಟಿಕೆಯನ್ನು (Virtual & Organized Event ಆಗಿ) ಮೇಲೆ ತಿಳಿಸಿದ ದಿನಾಂಕದೊಳಗೆ ಕನಿಷ್ಠ ಒಮ್ಮೆ ಆಯೋಜಿಸಲು ಸೂಚಿಸಿದೆ. ಸದರಿ Virtual ಓಟವನ್ನು ಒಂಟಿಯಾಗಿ ಅಥವಾ ಗುಂಪಾಗಿ ಯಾವ ಸಮಯದಲ್ಲಾದರೂ, ಎಲ್ಲಿಯಾದರೂ ಆಯೋಜಿಸಲು ಮತ್ತು ಸದರಿ ಓಟದಲ್ಲಿ **"ಭಾರತಕ್ಕಾಗಿ ಓಟ"** (Run4 India) ಎಂದು Hash tagged# ಮಾಡಲು ಕ್ರಮವಹಿಸಲು ಸೂಚಿಸಿದೆ ಮತ್ತು ಒಂದು ವ್ಯವಸ್ಥಿತ ಕಾರ್ಯಕ್ರಮವಾಗಿ, ಗ್ರಾಮ / ನಗರದ ಆಯಕಟ್ಟು ಪ್ರದೇಶಗಳಲ್ಲಿ ಆಯೋಜಿಸಲು ಕ್ರಮವಹಿಸುವುದು.

ತತ್ಸಂಬಂಧ ಆ ದಿನದಂದು ನಡೆದ ಚಟುವಟಿಕೆಗಳ ಮಾಹಿತಿಯನ್ನು ಛಾಯಾಚಿತ್ರಗಳೊಂದಿಗೆ AB-HWC Portal ಹಾಗೂ Fit India Portal ನಲ್ಲಿ ದಾಖಲಿಸುವುದು. ಈ ಸಂಬಂಧ ಮಾರ್ಗಸೂಚಿ ಹಾಗೂ ಪ್ರಕ್ರಿಯೆಗಳಿಗೆ https://fitindia.gov.in/freedom-run-2.0 ವೆಬ್‌ಸೈಟ್‌ಅನ್ನು ಅನುಸರಿಸುವುದು ಹಾಗೂ ಸಂಬಂಧಿಸಿದವರು (Individual / Organizer ) ನೊಂದಣಿಗಾಗಿ ಕ್ರಮವಹಿಸಲು ತಿಳಿಸಿದೆ (ಅನುಬಂಧ-1).

ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

ಪ್ರತಿಯನ್ನು :

1. ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

2. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು / ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು / ಎನ್.ಸಿ.ಡಿ / ಹೆಚ್.ಡಬ್ಲ್ಯೂಸಿ ಸಂಯೋಜಕರು.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
2. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕು.ಕ ಸೇವೆಗಳು, ಬೆಂಗಳೂರು.
3. ನಿರ್ದೇಶಕರು, ಆರೋಗ್ಯ ಮತ್ತು ಕು.ಕ ಸೇವೆಗಳ ನಿರ್ದೇಶಕರು, ಬೆಂಗಳೂರು
4. ಯೋಜನಾ ನಿರ್ದೇಶಕರು, ಆರ್.ಸಿ.ಹೆಚ್, ಬೆಂಗಳೂರು.
5. ಮಾನ್ಯ ಮುಖ್ಯ ಆಡಳಿತಾಧಿಕಾರಿಗಳು, ಎನ್.ಹೆಚ್.ಎಂ, ಬೆಂಗಳೂರು.
6. ಮುಖ್ಯ ಆರ್ಥಿಕ ಅಧಿಕಾರಿಗಳು, ಎನ್.ಹೆಚ್.ಎಂ, ಬೆಂಗಳೂರು.